# ಗಣಿತತಾರೆ ರಾಮಾನುಜನ್




ಶ್ರೀನಿವಾಸ ಅಯ್ಯಂಗಾರ್ ರಾಮಾನುಜನ್ ವಿಶ್ವಪ್ರಸಿದ್ಧ ಭಾರತೀಯ ಗಣಿತಶಾಸ್ತ್ರಜ್ಞ. ಆರ್ಥಿಕವಾಗಿ ಅಷ್ಟೇನೂ ಸಶಕ್ತವಲ್ಲದ, ಸಾಂಪ್ರದಾಯಿಕ ಕುಟುಂಬದಲ್ಲಿ ಜನಿಸಿದ ಅವರು ತಮ್ಮ ಪ್ರತಿಭೆಯಿಂದ ವಿಶ್ವ ಗಣಿತಶಾಸ್ತ್ರದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದಾರೆ.

ಶ್ರೀನಿವಾಸ ಅಯ್ಯಂಗಾರ್ ಮತ್ತು ಕೋಮಲತಮ್ಮಾಳ್ ರಾಮಾನುಜನ್‌ರ ಅಪ್ಪ–ಅಮ್ಮ. (ಜನನ: ಡಿ. 22, 1887). ತಂದೆ ರಾತ್ರಿಪಾಳಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ಅಮ್ಮನ ಕಣ್ಣಳತೆಯಲ್ಲಿ ಬೆಳೆದ ಅವರು, ಕುಂಬಕೋಣಂನ ತಮಿಳು ಮಾಧ್ಯಮದ ಶಾಲೆಗೆ ಸೇರಿದರು. ಗಣಿತ ಮತ್ತು ಭೂಗೋಳ ಇವರ ನೆಚ್ಚಿನ ವಿಷಯಗಳು. ಗಣಿತದಲ್ಲಿನ ಆಸಕ್ತಿ 14ನೇ ವಯಸ್ಸಿಗೆ ಇವರಿಗೆ 'ಪಂಡಿತ ಪ್ರಶಸ್ತಿ' ದೊರಕಿಸಿಕೊಟ್ಟಿತು. 16ನೇ ವಯಸ್ಸಿನಲ್ಲಿ ಗ್ರಂಥಾಲಯದಲ್ಲಿ ಸಿಕ್ಕಿದ ಜಿ.ಎಸ್. ಕಾರ್ ಅವರ 'ಎ ಸಿನಾಪ್ಸಿಸ್ ಆಫ್ ಎಲಿಮೆಂಟರಿ ರಿಜಲ್ಟ್ಸ್ ಇನ್ ಪ್ಯೂರ್ ಮೆಥಮೆಟಿಕ್ಸ್' ಕೃತಿಯಲ್ಲಿನ 5000 ಥಿಯರಿಗಳನ್ನು ಬಿಡಿಸಲು ಯತ್ನಿಸಿದರು.

ಸದಾ ಗಣಿತದ ಸೂತ್ರಗಳ ಬಗ್ಗೆ ಯೋಚಿಸುತ್ತಿದ್ದ ಅವರ ಸಮೀಪ ಕಾಗದದ ಗುಡ್ಡೆ ಬೀಳುತ್ತಿತ್ತಂತೆ. ರಸ್ತೆ ಮೇಲೆ ಬಿದ್ದ ಕಾಗದ ತುಂಡನ್ನೂ ಆಯ್ದುಕೊಂಡು ಅದರ ಮೇಲೆ ಗೀಚುತ್ತಿದ್ದರು. ಇವರ ಬರವಣಿಗೆ ಗಣಿತ ಕಲಿತವರಿಗೆ ಮಾತ್ರ ಅರ್ಥವಾಗುವಂತೆ ಇರುತ್ತಿತ್ತು. ಸಂಖ್ಯೆ ಹಾಗೂ ಸಮೀಕರಣಗಳು ರಾಮಾನುಜನ್‌ರಿಗೆ ಪ್ರಿಯವಾದ ಸಂಗತಿಗಳಾಗಿದ್ದವು.

ಪ್ರಖ್ಯಾತ ವಿಜ್ಞಾನಿ ಜಿ.ಎಚ್. ಹಾರ್ಡಿ ಮತ್ತು ಜೆ.ಇ. ಲಿಟ್ಲ್‌ವುಡ್ ಅವರುಗಳು ರಾಮಾನುಜನ್‌ರ ಫಾರ್ಮುಲಾಗಳಿಂದ ಪ್ರಭಾವಿತರಾಗಿ, ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುವಂತೆ ಆಹ್ವಾನಿಸಿದರು. ರಾಮಾನುಜನ್ ಅವರನ್ನು ಪ್ರಸಿದ್ಧ ವಿಜ್ಞಾನಿ ಜಿ.ಎಚ್. ಹಾರ್ಡಿ 'ಅದ್ಭುತವಾದ ಗಣಿತಜ್ಞ' ಎಂದಿದ್ದಾರೆ.

ಸಸ್ಯಾಹಾರಿಯಾಗಿದ್ದ ರಾಮಾನುಜನ್ ಅವರಿಗೆ ಇಂಗ್ಲೆಂಡ್‌ನಲ್ಲಿ ಊಟದ ಸಮಸ್ಯೆ ಕಾಡಿತು. ಅಪೌಷ್ಟಿಕತೆ ಕಾಡತೊಡಗಿತು. ಇದೆಲ್ಲದರ ಪರಿಣಾಮವಾಗಿ ಕ್ಷಯರೋಗಕ್ಕೆ ತುತ್ತಾದರು. ತಮ್ಮ ಮೂವತ್ತರಡನೇ ವಯಸ್ಸಿನಲ್ಲಿ (ಏ. 26, 1920) ಸಾವಿಗೀಡಾದರು.

ಗಣಿತ ಕ್ಷೇತ್ರಕ್ಕೆ ರಾಮಾನುಜನ್ ನೀಡಿದ ಅಸಾಧಾರಣ ಕೊಡುಗೆಯನ್ನು ಸ್ಮರಿಸಲಿಕ್ಕಾಗಿ ಅವರ ಜನ್ಮ ದಿನವಾದ ಡಿ. 22ನ್ನು 'ರಾಷ್ಟ್ರೀಯ ಗಣಿತ ದಿನ' ಎಂದು ಆಚರಿಸಲಾಗುತ್ತಿದೆ. 32 ವರ್ಷದೊಳಗಿನ ಯುವಗಣಿತ ವಿದ್ಯಾರ್ಥಿಗಳಿಗೆ ತಮಿಳುನಾಡು ಸರ್ಕಾರ ಗೌರವಿಸುತ್ತಾ ಬಂದಿದೆ. ಕುಂಬಕೋಣಂನ ಸಾರಂಗಪಾಣಿ ದೇವರಗುಡಿ ಬೀದಿಯಲ್ಲಿ ಇರುವ ಅವರ ಸಾಂಪ್ರದಾಯಿಕ ಮನೆಯನ್ನು ತಮಿಳುನಾಡು ಸರ್ಕಾರ 'ಶಾಸ್ತ್ರ ವಿಶ್ವವಿದ್ಯಾಲಯ'ದ ಮ್ಯೂಜಿಯಂ ಆಗಿ ಪರಿವರ್ತಿಸಿದೆ.

■ ಬಾಲಾಜಿ ಟಿ.ಆರ್.





ತಿಥಿ, ವಾರ, ನಕ್ಷತ್ರ, ಪ್ರಮುಖ ಉತ್ಸವ, ಸರ್ಕಾರಿ ರಜೆಗಳ ಸ್ಪಷ್ಟ ವಿವರ




ವರ್ಷದ ಸಮಗ್ರ ಮಾರ್ಗದರ್ಶಿ

ಬೆಲೆ ₹25 ಮಾತ್ರ

2019

ದಿನದರ್ಶಿಕೆ ಮಾರುಕಟ್ಟೆಯಲ್ಲಿ ಲಭ್ಯ

ಪ್ರತಿಗಳಿಗಾಗಿ ಸಂಪರ್ಕಿಸಿ: ನಿಮ್ಮ ನ್ಯೂಸ್ ಏಜೆಂಟರು, ಪುಸ್ತಕದ ಅಂಗಡಿಗಳು ಅಥವಾ ನಮ್ಮ ಕಚೇರಿಗಳು:
ದಿ ಪ್ರಿಂಟರ್ಸ್(ಮೈಸೂರು) ಪ್ರೈ.ಲಿ., 75, ಎಂ.ಜಿ. ರಸ್ತೆ,
ಬೆಂಗಳೂರು-560 001. ದೂರವಾಣಿ: 25880199/219/227.
ಶಾಖೆಗಳು: ಮೈಸೂರು: 2420532/2420129.
ಹುಬ್ಬಳ್ಳಿ: 2372081/2372516.
ಮಂಗಳೂರು: 2215852/2218334.
ಕಲ್ಬುರ್ಗಿ: 255539/ 221808. ದಾವಣಗೆರೆ: 230846/255048